ಪ್ರತಿಭಟನೆಯನ್ನು ನೀವು ಎದುರಿಸಬೇಕಾಗುತ್ತದೆ. ಇದರ ಬಗ್ಗೆ ಮೊದಲೇ ಎಚ್ಚರಿಕೆ ಕೊಡುತ್ತಿದ್ದೇನೆ ಪವರ್ ಕಟ್ ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು.—ನೀವು ಕೊಡತಕ್ಕ ಎಚ್ಚರಿಕೆಯನ್ನು ಪುನರುಚ್ಚಾರ ಮಾಡುತ್ತಿರುವುದನ್ನು ಸರ್ಕಾರ ದವರು ಗಮನಿಸಿದ್ದಾರೆ, ನೀವು ಎತ್ತಿರತಕ್ಕ ಮಹತ್ವದ ಪ್ರಶ್ನೆಯ ಅರಿವು ನನಗೆ ಇದೆ. ಸರ್ಕಾರದ ಮುಂದಿರತಕ್ಕ ತೊಂದರೆಗಳನ್ನು ಕೂಡ ಅವರು ಹೇಳಿದ್ದಾರೆ. ಬೇಡಿಕೆ ಮತ್ತು ಉತ್ಪಾದನೆಯ ಮಧ್ಯೆ ಕಳೆದ ಹತ್ತಾರು ವರ್ಷಗಳಿಂದ ಆಜಗಜಾಂತರ ವ್ಯತ್ಯಾಸ ಬೆಳೆದುಕೊಂಡು ಬಂದಿರುವುದೇ ಈ ಎಲ್ಲಾ ತೊಂದರೆಗಳಿಗೆ ಕಾರಣವಾಗಿದೆ. ಈ ಸಮಸ್ಯೆಯ ತೀವ್ರತೆಯನ್ನು ನಾವೆಲ್ಲರೂ ಕುಳಿತು ಯೋಚನೆ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಅದಕೋಸ್ಕರವೇ ನಾನು ಸದನದ ಸಮಿತಿ ಮಾಡಿ ಎಂದು ಹೇಳಿದ್ದೆ. ಹೈಟೆನ್‌ಷನ್ ಪವರ್‌ಕಟ್ ಹೆಚ್ಚು ಮಾಡಿ ಬಯಲು ಸೀಮೆಯ ರೈತರ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಿ ಉತ್ಪಾದನೆ ಜಾಸ್ತಿಯಾಗುತ್ತದೆ. ಹೊಸ ಪಂಪು ಸೆಟ್ಟುಗಳಿಗೆ ಕಳೆದ ಎರಡು ವರ್ಷಗಳಿಂದ ಕರೆಂಟ್ ಕೊಡದೇ ಹೋದರೆ ನಮ್ಮ ಗತಿ ಏನು? ನಾವು ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ಮಾನ್ಯ ಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪುನರ್ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ರಾಜಶೇಖರ ಮೂರ್ತಿ.—ಮಾನ್ಯ ಬೈರೇಗೌಡರಿಗೆ ರೈತರ ಬಗ್ಗೆ ಎಷ್ಟು ಸಹಾನುಭೂತಿ ಇದೆಯೋ ಅದಕ್ಕಿಂತ ಹೆಚ್ಚು ನಮ್ಮ ಸರ್ಕಾರಕ್ಕೆ ಸಹಾನುಭೂತಿ ಇದೆ. ಸರ್ಕಾರದವರು ರೈತರಿಗೆ ಏನೂ ಮಾಡಿಲ್ಲ ಎನ್ನುವ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದು ೧೦ ದಿವಸ ಆಗಿದೆ. ಕಳೆದ ಆರು ವರ್ಷಗಳಿಂದ ಅವರು ಇಲ್ಲಿ ಕುಳಿತಿದ್ದರು, ಅವರು ಮೊದಲು ಏತಕ್ಕೆ ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ.—ಬಹಳ ಸಂತೋಷ. ಏನು ಮಾಡಿದ್ದೀವೆಂದು ಹೇಳುತ್ತೇನೆ. ಆರು ವರ್ಷದಿಂದ ನಾವು ಏನೂ ಮಾಡದೇ ಇರುವುದಕ್ಕೆ ೧೭೭ಜನರನ್ನು ಆರಿಸಿ ಕಳುಹಿಸಿದ್ದಾರೆ. ನೀವು ಏನು ಮಾಡುತ್ತೀರಿ ಅದನ್ನು ಹೇಳಿ.

ಅಧ್ಯಕ್ಷರು.—ಅವರು ಬಂದು ಕೇವಲ ೧೦ ದಿವಸಗಳಾಗಿವೆ. ಏನು ಮಾಡುತ್ತಾರೆಂಬುದನ್ನು ಕಾದು ನೋಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ರೈತರ ವಿಚಾರದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸಭೆಯಿಂದ ನಾವು ಹೊರಗೆ ಹೋಗುತ್ತೇವೆ.

(ಜನತಾ ಪಕ್ಷದ ಇಬ್ಬರು ಸದಸ್ಯರು ಸಭೆಯಿಂದ ನಿರ್ಗಮಿಸಿದರು.)

ನಿಯಮ ೩೩೪ರ ಮೇರೆಗೆ

೧ ದಿನಾಂಕ ೯-೧೨-೧೯೮೯ರಂದು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಕರ್ನಾಟಕ-ಮಹಾರಾಷ್ಟ್ರದ ಗಡಿ ವಿವಾದ ಬಗೆಹರಿದಿಲ್ಲವೆಂದು ಪತ್ರಿಕಾ ಹೇಳಿಕೆ ನೀಡಿರುವುದು

ಅಧ್ಯಕ್ಷರು.—ಈಗ ನಿಯಮ ೩೩೪ರ ಮೇರೆಗೆ ಪ್ರಸ್ತಾಪ.

ಶ್ರೀ ಶಿವಾನಂದ ಎಸ್. ಕೌಜಲಗಿ (ಬೈಲಹೊಂಗಲ).—ಮಹಾರಾಷ್ಟ್ರದ ಮುಖ್ಯಮಂತ್ರಿಗಳು ದಿನಾಂಕ ೯-೧೨-೧೯೮೯ರಂದು ಪತ್ರಿಕಾ ಹೇಳಿಕೆಯನ್ನು ನೀಡಿ ಇನ್ನೂ ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಬಗೆಹರಿದಿರುವುದಿಲ್ಲ ಮತ್ತು ಮಹಾಜನ್ ವರದಿಯನ್ನು ಒಪ್ಪುವುದಿಲ್ಲವೆಂದೂ, ಜನಗಣತಿ ಪ್ರಕಾರ ಬೆಳಗಾಂ ಗಡಿ ವಿವಾದವನ್ನು ಬಗೆಹರಿಸಬೇಕೆಂದು ಹೇಳಿರುತ್ತಾರೆ.

ಈ ಮಹಾರಾಷ್ಟ್ರದ ಮುಖ್ಯಮಂತ್ರಿಗಳವರ ಹೇಳಿಕೆಯಿಂದ ಗಡಿ ಭಾಗಗಳಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೆ ಭಯವುಂಟಾಗಿದೆ. ಆದ ಕಾರಣ, ಹೊಸ ಸರ್ಕಾರದ ನೀತಿಯನ್ನು ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಈ ಸಭೆಯಲ್ಲಿ ಪ್ರಕಟಿಸಿ ಗಡಿ ಭಾಗದಲ್ಲಿರುವ ಕನ್ನಡಿಗರ ಭಯವನ್ನು ನಿವಾರಿಸ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಿಗೆ ಕೋರುತ್ತೇನೆ.

SRI SHIVANANDA S. KOUJALAGI. — Sir, with due respect to the Chair. I submit that I can understand that there is no necessity for the Government to give immediate reply. But atleast the Chief Minister must be present.

MR. SPEAKER — There are so many ministers here. I cannot agree with the proposition that the concerned Minister must be present whenever a matter under Rule 334 is raised. You will get the reply from the concerned Minister later.

೨) ತುಂಗಭದ್ರ ಎಡದಂಡೆ ಕಾಲುವೆಗೆ ನೀರು ಬಿಡಲು ಬಳ್ಳಾರಿ ಶಾಸಕರ ಒತ್ತಾಯ

ಶ್ರೀ ಬಾದರಲಿ ಹಂಪನಗೌಡ (ಸಿಂಧನೂರು).— ದಿನಾಂಕ ೭-೧೨-೧೯೮೯ರಂದು ಸನ್ಮಾನ್ಯ ಲೋಕೋಪಯೋಗಿ ಸಚಿವರ ಕಚೇರಿಯಲ್ಲಿ ಬಳ್ಳಾರಿ ಜಿಲ್ಲೆಯ ಲೋಕಸಭಾ ಸದಸ್ಯರು, ಶಾಸಕರು ಮತ್ತು ರಾಯಚೂರು ಜಿಲ್ಲೆಯ ಶಾಸಕರುಗಳ ಜೊತೆಗೆ ಹಿಂದೆ ಡಿ.ಸಿ.ಸಿ. ಸಭೆಯಲ್ಲಿ ಎಡದಂಡೆ ಕಾಲುವೆಗೆ ೨೫ ದಿನ ನೀರು ಬಂದ್ ಮಾಡುವ ಬಗ್ಗೆ ಚರ್ಚಿಸಿ, ೨೫ ದಿನ ಕಾಲುವೆಗೆ ನೀರು ಬಂದ್ ಮಾಡುವುದರಿಂದ ಬೆಳೆದು ನಿಂತ ಹತ್ತಿ ಮತ್ತು ಸೂರ್ಯಕಾಂತಿ ಇನ್ನಿತರ ಬೆಳೆಗಳಿಗೆ ನೀರು ಒದಗಿಸದೆ, ಕೋಟಿಗಟ್ಟಲೆ ಹಣ ರೈತರಿಗೆ ಹಾನಿಯಾಗುವ ಸಂಭವವಿದ್ದು ಪುನಃ ಇದರ ಬಗ್ಗೆ ಸಚಿವರು ನಮ್ಮ ಮತ್ತು ಬಳ್ಳಾರಿ ಜಿಲ್ಲೆಯ ಶಾಸಕರು ಮತ್ತು ಲೋಕಸಭಾ ಸದಸ್ಯರನ್ನು ಕರೆದು ಚರ್ಚಿಸಿ, ದಿನಾಂಕ ೧೮ರಿಂದ ಕಾಲುವೆಗೆ ನೀರು ಬಿಡುವ ನಿರ್ಣಯವನ್ನು ತೆಗೆದುಕೊಂಡು ಈಗ ಪುನಃ ಈ ದಿವಸ ಬೆಳಿಗ್ಗೆ ರಾಯಚೂರು ಜಿಲ್ಲೆಯ ಶಾಸಕರ ಜೊತೆಗೆ ಚರ್ಚಿಸಿ ಪುನಃ ಎಡ ದಂಡೆಯ ಕಾಲುವೆಗೆ ನೀರು ಬಿಡುವುದನ್ನು ನಿಲ್ಲಿಸುತ್ತೇವೆಂದು ನಿರ್ಣಯ ತೆಗೆದುಕೊಂಡಿರುವುದರಿಂದ ಆ ಭಾಗದ ರೈತರಿಗೆ ಬೆಳೆ ನಾಶವಾಗಿ ಬೀದಿಗಿಳಿಯುವ ಪ್ರಸಂಗ ಬಂದಿರುವುದರಿಂದ ನಾನು ತಮ್ಮ ಮೂಲಕ ಸರಕಾರಕ್ಕೆ ನೀರು ಬಿಡಲು ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಹಂಪನಗೌಡರು ಪ್ರಸ್ತಾಪಿಸಿರುವ ವಿಚಾರದಲ್ಲಿ ನಾನು ಹೇಳಬಯಸುವುದೇನೆಂದರೆ...

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಅತೀ ಮುಖ್ಯವಾದ ಗಡಿ ಪ್ರಶ್ನೆಯ ಬಗ್ಗೆ ಮಾನ್ಯ ಸದಸ್ಯರಾದ ಶಿವಾನಂದ ಕೌಜಲಗಿಯವರು ಪ್ರಸ್ತಾಪಿಸಿದಾಗ ಸರಕಾರದ ವತಿಯಿಂದ ಯಾವುದೇ ಉತ್ತರವಿರಲಿಲ್ಲ. ಈಗ ಅದೇ ನಿಯಮದ ಮೇರೆಗೆ ಪ್ರಸ್ತಾಪ ಮಾಡಿದ ವಿಷಯಕ್ಕೆ ಉತ್ತರ ಕೊಡುತ್ತಿದ್ದೀರಿ...

(ಗೊಂದಲ)

ಗಡಿ ಪ್ರಶ್ನೆಯ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಜನಮತ ಗಣನೆಯ ಬಗ್ಗೆ ಮಾತನಾಡಿದ್ದಾರೆ... ಇದೊಂದು ಗುರುತರವಾದ ಪ್ರಶ್ನೆ ಇದಕ್ಕೆ ಸರಕಾರದವರ ಉತ್ತರ ಬೇಡವೆ?

ಅಧ್ಯಕ್ಷರು.— ಪ್ರಸ್ತಾಪ ಮಾಡಿದ ಮಾನ್ಯ ಕೌಜಲಗಿಯವರಿಗೆ ನಾನು ನಿಯಮಾವಳಿಯನ್ನು ತಿಳಿಹೇಳಿದ ಬಳಿಕ ಕುಳಿತರು. ತಾವುಗಳು ಸುಮ್ಮನೆ ಪ್ರಶ್ನಿಸುತ್ತಿದ್ದೀರಿ...

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ ಇದು ಕೇವಲ ಕೌಜಲಗಿಯವರ ಪ್ರಶ್ನೆ ಅಲ್ಲ. ಇದು ಇಡೀ ರಾಜ್ಯದ ಪ್ರಶ್ನೆ. ಮಹಾಜನ್ ವರದಿಯ ಬಗ್ಗೆ ಸರಕಾರದ ನಿಲುವು ಏನು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲವೆ?

(ಗೊಂದಲ)

ಅಧ್ಯಕ್ಷರು.— ವಾಟಾಳ್ ನಾಗರಾಜ್‌ರವರೇ ತಮ್ಮ ಹೆಸರು ಈ ಪ್ರಸ್ತಾವನೆಯಲ್ಲಿಲ್ಲ. ಆ ಪ್ರಸ್ತಾವನೆಯನ್ನು ಕಳುಹಿಸಿರುವವರು ಮಾನ್ಯ ಕೌಜಲಗಿಯವರು ಮಾತ್ರ ದಯವಿಟ್ಟು ತಾವು ಕುಳಿತುಕೊಳ್ಳಿ...

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ಇದು ರಾಜ್ಯದ ಪ್ರಶ್ನೆ, ರಾಜ್ಯದ ಪ್ರಶ್ನೆ ಬಂದಾಗ ನಮಗೆ ರಕ್ಷಣೆಯನ್ನು ಕೇಳಿ. ಇದರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇವೆ.